# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 48 / 2018

ಸಿಡಬ್ಲ್ಯೂ- **2**
ಪಿಡಬ್ಲ್ಯೂ- **4**

ದಿನಾಂಕಃ **30.10.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಸಾಯಿಬಣ್ಣ |
| ತಂದೆಯ ಹೆಸರುಃ | - | ಮಹಾದೇವಪ್ಪ |
| ವಯಸ್ಸುಃ | - | **53** ವರ್ಷ |
| ಉದ್ಯೋಗಃ | - | ಒಕ್ಕಲುತನ. |
| ವಾಸಸ್ಥಳಃ | - | ಗಾಜರಕೋಟ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-3 ರವರ ಪರಿಚಯ ನನಗೆ ಇರುತ್ತದೆ. ದಿನಾಂಕಃ 23.2017 ರಂದು ನಾನು ಪೊಲೀಸ ಠಾಣೆ ಮುಂದೆ ನಿಂತಿದ್ದೆ ಆವಾಗ ಪೊಲೀಸರು ನನಗೆ ಪಂಚನಾಮೆಗೆ ಕರೆದಿದ್ದರು. ಪಂಚನಾಮೆಯನ್ನು ಸರಕಾರಿ ವಸತಿ ಗೃಹದಲ್ಲಿ ಮಾಡಿದ್ದರು. ಮನೆಯಲ್ಲಿ ಕಳ್ಳತನ ಆದ ಸ್ಥಳದ ಪಂಚನಾಮೆಯನ್ನು ಮಾಡಿದ್ದರು. ನಂತರ ನನ್ನ ಸಹಿಯನ್ನು ಪಡೆದುಕೊಂಡಿದ್ದರು. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಗುನ್ಹಾ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ಕಳ್ಳತನ ಮಾಡಿದವರ ಬೆರಳುಮುದ್ರೆಗಳು ಹಾಗೂ ಕೈ ಗುರುತು ಅಲಮರ್ ಮತ್ತು ಎರಡು ಸ್ಟೀಲ್ ಡಬ್ಬಿಗಳ ಮೇಲೆ ಇದ್ದವು ಅವುಗಳನ್ನು ವಿಧಿವಿಜ್ಞಾನ ಪ್ರಯೋಗಲಾಯದ ಅಧಿಕಾರಿಗಳು ಕಲಬುರಗಿ ರವರು ಸಂಗ್ರಹಣೆ ಮಾಡಿದ್ದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಸ್.ಸಿ.ಎನ್. ರವರಿಂದಃ

ನಾನು ಶಾಲೆಯನ್ನು ಕಲಿತ್ತಿರುವುದಿಲ್ಲ. ಚಾಸಾ-3 ರಿಂದ 7 ರವರ ಪರಿಚಯ ನನಗೆ ಇರುತ್ತದೆ. ಚಾಸಾ-1 ರವರು ನನ್ನ ಗೆಳೆಯ ಇರುತ್ತಾನೆ ಎಂದರೆ ಸರಿ. ಚಾಸಾ-1 ರವರ ಊರು ಗಾಜರಕೋಟ

ಇರುತ್ತದೆ. ಪಂಚನಾಮೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಪಂಚನಾಮೆಯನ್ನು ಕಳ್ಳತನ ಮಾಡಿದ ಮನೆಯ ಮುಂದೆ ಬರೆದಿದ್ದರು. ಸರಕಾರಿ ವಸತಿ ಗೃಹದ ಅಕ್ಕಪಕ್ಕದಲ್ಲಿ ಯಾರ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಸದರಿ ಮನೆಯ ಅಕ್ಕಪ್ಕ ಸರಕಾರಿ ವಸತಿ ಗೃಹಗಳು ಇರುತ್ತವೆ ಎಂದು ಹೇಳುತ್ತಾರೆ. ಸದರಿ ಮನೆಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸದರಿ ಬೆರಳು ಮುದ್ರೆಗಳು ಯಾರದ್ದು ಇರುತ್ತವೆ ಎಂದರೆ ಸಾಕ್ಷಿಯು ಕಳ್ಳತನ ಮಾಡಿದವರದ್ದು ಇರುತ್ತವೆ ಎಂದು ಹೇಳುತ್ತಾರೆ. ಸದರಿ ಬೆರಳುಮುದ್ರೆಗಳನ್ನು ಪೊಲೀಸರು ಪಡೆದುಕೊಂಡಿದ್ದರು. ಗಾಜರಕೋಟದಿಂದ ಯಾದಗಿರಿಗೆ ಬರಲು 30 ಕಿಲೋ ಮೀಟರ ಅಂತರ ಇರುತ್ತದೆ. ದಿನಾಂಕಃ 23.07.2017 ರಂದು ನಾನು ತಹಸೀಲ್ದಾರ ಕಚೇರಿಗೆ ಬಂದಿದ್ದೆ ಸದರಿ ದಿನದಂದು ಅಮಾವಾಸ್ಯೆ ಇತ್ತು. ಸದರಿ ದಿನದಂದು ಹಳೆಯ ನ್ಯಾಯಾಲಯದ ಪಕ್ಕದಲ್ಲಿ ಇದ್ದೆ. ನಾನು ಹೇಳಿದ ಹಾಗೇ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೇ ನಿಪಿ 3 ನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಗೆಳೆಯನ್ನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಫೋನ್ ಕರೆ ಮಾಡಿ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ 2-30 ಗಂಟೆಯಿಂದ 3-30 ಗಂಟೆಯ ವರೇಗೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.